# Visit of H. E. Dr. Hossein Amir Abdollahian, Foreign Minister of the Islamic Republic of Iran to India (June 08-10, 2022)

June 08, 2022

---

## ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್‌ನ ವಿದೇಶಾಂಗ ಸಚಿವರಾದ ಘನವೆತ್ತ ಡಾ. ಹೊಸೈನ್ ಅಮೀರ್ ಅಬ್ದುಲ್ಲಾಹಿಯಾನ್ ಅವರ ಭಾರತ ಭೇಟಿ (ಜೂನ್ 08-10, 2022)

ಜೂನ್ 08, 2022

ವಿದೇಶಾಂಗ ವ್ಯವಹಾರಗಳ ಸಚಿವ (ಇಎಎಂ) ಡಾ.ಎಸ್ ಜೈಶಂಕರ್ ಅವರ ಆಹ್ವಾನದ ಮೇರೆಗೆ, ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್‌ನ ವಿದೇಶಾಂಗ ಸಚಿವ, ಘನವೆತ್ತ ಡಾ. ಹುಸೇನ್ ಅಮೀರ್ ಅಬ್ದುಲ್ಲಾಹಿಯಾನ್ ಅವರು 08-10 ಜೂನ್ 2022 ರವರೆಗೆ ಭಾರತಕ್ಕೆ ಅಧಿಕೃತ ಭೇಟಿಯಲ್ಲಿದ್ದಾರೆ. ಘನವೆತ್ತ ಡಾ. ಹುಸೇನ್ ಹೊಸೈನ್ ಅಮೀರ್ ಅಬ್ದುಲ್ಲಾಹಿಯಾನ್ ಅವರು ಆಗಸ್ಟ್ 2021 ರಲ್ಲಿ ಅಧಿಕಾರ ವಹಿಸಿಕೊಂಡ ನಂತರ ಇದು ಅವರ ಮೊದಲ ಭಾರತ ಭೇಟಿಯಾಗಿದೆ.

2. ಭಾರತ ಮತ್ತು ಇರಾನ್ ನಿಕಟ ಐತಿಹಾಸಿಕ ಮತ್ತು ನಾಗರಿಕ ಸಂಬಂಧಗಳನ್ನು ಹೊಂದಿವೆ. ನಮ್ಮ ದ್ವಿಪಕ್ಷೀಯ ಸಂಬಂಧಗಳು ಸಂಸ್ಥೆಗಳು, ಸಂಸ್ಕೃತಿ ಮತ್ತು ಜನರ ನಡುವಿನ ಪರಸ್ಪರ ಬಲವಾದ ಸಂಬಂಧಗಳಿಂದ ಗುರುತಿಸಲ್ಪಟ್ಟಿವೆ.

3. ನಿಯೋಗ ಮಟ್ಟದ ಮಾತುಕತೆಯ ಸಂದರ್ಭದಲ್ಲಿ, ಉಭಯ ಸಚಿವರು ರಾಜಕೀಯ, ಸಾಂಸ್ಕೃತಿಕ ಮತ್ತು ಜನರ ಪರಸ್ಪರ ಸಂಬಂಧಗಳು ಸೇರಿದಂತೆ ದ್ವಿಪಕ್ಷೀಯ ಸಂಬಂಧಗಳ ಎಲ್ಲಾ ಅಂಶಗಳನ್ನು ಚರ್ಚಿಸಿದರು. ಇರಾನ್‌ನಲ್ಲಿ ನೆಲೆಸಿರುವ ಅಫ್ಘಾನ್ ಪ್ರಜೆಗಳಿಗೆ ಕೋವಿಡ್-19 ಲಸಿಕೆಗಳ ಪೂರೈಕೆ ಸೇರಿದಂತೆ ಅಫ್ಘಾನಿಸ್ತಾನಕ್ಕೆ ಭಾರತದ ವೈದ್ಯಕೀಯ ಸಹಾಯವನ್ನು ಸುಗಮಗೊಳಿಸುವಲ್ಲಿ ಇರಾನ್‌ನ ಪಾತ್ರವನ್ನು ವಿದೇಶಾಂಗ ಸಚಿವರು ಶ್ಲಾಘಿಸಿದರು.

4. ಎರಡೂ ಕಡೆಯವರು ಪ್ರಾದೇಶಿಕ ಸಂಪರ್ಕ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರದ ಪ್ರಾಮುಖ್ಯತೆಯನ್ನು ಗುರುತಿಸಿದರು ಮತ್ತು ಚಬಹಾರ್ ಬಂದರಿನ ಶಹೀದ್ ಬೆಹೆಷ್ಟಿ ಟರ್ಮಿನಲ್‌ನಲ್ಲಿ ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಿದರು. ಚಬಹಾರ್ ಬಂದರು ಭೂ-ಆವೃತವಾದ ಅಫ್ಘಾನಿಸ್ತಾನಕ್ಕೆ ಹೆಚ್ಚು ಅಗತ್ಯವಿರುವ ಕಡಲ-ಪ್ರವೇಶವನ್ನು ಒದಗಿಸಿದೆ ಮತ್ತು ಮಧ್ಯ ಏಷ್ಯಾ ಸೇರಿದಂತೆ ಪ್ರದೇಶಕ್ಕೆ ವಾಣಿಜ್ಯ ಸಾರಿಗೆ ಕೇಂದ್ರವಾಗಿ ಹೊರಹೊಮ್ಮಿದೆ ಎಂದು ಕಡೆಯವರು ಒಪ್ಪಿಕೊಂಡರು. ಚಬಹಾರ್ ಬಂದರಿನ ಅಭಿವೃದ್ಧಿಗೆ ಸಹಕಾರವನ್ನು ಮುಂದುವರಿಸುವ ತಮ್ಮ ಬದ್ಧತೆಯನ್ನು ಅವರು ಪುನರುಚ್ಚರಿಸಿದರು. ಕಾರ್ಯಾಚರಣೆಯ ಅಂಶಗಳನ್ನು ಪರಿಹರಿಸಲು ಎರಡೂ ದೇಶಗಳ ತಂಡಗಳು ಶೀಘ್ರದಲ್ಲೇ ಭೇಟಿಯಾಗಲಿವೆ.

5. ಸಚಿವರುಗಳು ಅಫ್ಘಾನಿಸ್ತಾನ ಸೇರಿದಂತೆ ಅಂತರಾಷ್ಟ್ರೀಯ ಮತ್ತು ಪ್ರಾದೇಶಿಕ ವಿಷಯಗಳ ಬಗ್ಗೆ ಚರ್ಚಿಸಿದರು ಮತ್ತು ಅಫ್ಘಾನಿಸ್ತಾನದ ಜನರಿಗೆ ತಕ್ಷಣದ ಮಾನವೀಯ ನೆರವು ನೀಡುವ ಪ್ರಾಮುಖ್ಯತೆಯನ್ನು ಪುನರುಚ್ಚರಿಸಿದರು ಮತ್ತು ಶಾಂತಿಯುತ, ಸುರಕ್ಷಿತ ಮತ್ತು ಸ್ಥಿರವಾದ ಅಫ್ಘಾನಿಸ್ತಾನವನ್ನು ಬೆಂಬಲಿಸಲು ಪ್ರತಿನಿಧಿ ಮತ್ತು ಅಂತರ್ಗತ ರಾಜಕೀಯ ವ್ಯವಸ್ಥೆಯ ಅಗತ್ಯವನ್ನು ಪುನರುಚ್ಚರಿಸಿದರು.

6. ಇರಾನ್ ವಿದೇಶಾಂಗ ಸಚಿವರು ಜೆಸಿಪಿಒಎಗೆ ಸಂಬಂಧಿಸಿದಂತೆ ಪ್ರಸ್ತುತ ಪರಿಸ್ಥಿತಿಯನ್ನು ವಿದೇಶಾಂಗ ಸಚಿವರಿಗೆ

ವಿವರಿಸಿದರು. ಉಕ್ರೇನ್ ಸಂಘರ್ಷ ಮತ್ತು ಅದರ ಪರಿಣಾಮಗಳ ಬಗ್ಗೆ ಇಬ್ಬರು ಸಚಿವರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು.

7. ಭೇಟಿಯ ಸಂದರ್ಭದಲ್ಲಿ, ಇರಾನ್ ವಿದೇಶಾಂಗ ಸಚಿವರು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದರು ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಶ್ರೀ ಅಜಿತ್ ಕುಮಾರ್ ದೋವಲ್ ಅವರೊಂದಿಗೆ ಸಭೆ ನಡೆಸಿದರು.

**ನವ ದೆಹಲಿ**

**ಜೂನ್ 08, 2022**

DISCLAIMER: This is an approximate translation. The original is available in English on MEA’s website and may be referred to as the official press release